


International Journal of Kannada Research
www.kannadajournal.com

ISSN: 2454–5813
IJKR 2023; 9(2): 163-164
© 2023 IJKR
www.kannadajournal.com
Received: 22-02-2023
Accepted: 27-03-2023

**Dr. Asha MH**
Assistant Professor,
Department of Kannada,
Soundarya Institute of
Manegement and Science,
Soundarya Nagar, Sidedahalli,
Nagasandra, Bangalore,
Karnataka, India

**Corresponding Author:**
**Dr. Asha MH**
Assistant Professor,
Department of Kannada,
Soundarya Institute of
Manegement and Science,
Soundarya Nagar, Sidedahalli,
Nagasandra, Bangalore,
Karnataka, India

# ‘ಕೆರೆಹೊನ್ನಮ್ಮ’ ಕಥನಕಾವ್ಯದಲ್ಲಿ ಹೆಣ್ಣಿನ ಬಲಿ

**Dr. Asha MH**

**ಪೀಠಿಕೆ**

ಮಾನವ ಸಮುದಾಯದ ಅರ್ಧದಷ್ಟು ಜನಸಂಖ್ಯೆ ಮಹಿಳೆಯರದ್ದು, ಜಗತ್ತಿನಾದ್ಯಂತ ದೇಶ, ಧರ್ಮ,ಜಾತಿ,ಭಾಷೆ ಮೊದಲಾದವುಗಳ ವ್ಯತ್ಯಾಸವಿಲ್ಲದೆ ಈ ಅರ್ಧದಷ್ಟು ಸಮುದಾಯ ಶೋಷಣೆಗೆ ಒಳಗಾಗುತ್ತಲೇ ಬಂದಿರುವುದು ಚಾರಿತ್ರಿಕ ವಾಸ್ತವ. ಶೋಷಕ ಸ್ಥಾನದಲ್ಲಿರುವ ಪುರುಷ ಸಮುದಾಯವೇ ಬಹುತೇಕ ಚರಿತ್ರೆಯನ್ನು ರೂಪಿಸುವ, ದಾಖಲಿಸುವ ಕಾರ್ಯವನ್ನು ನಿರ್ವಹಿಸುತ್ತ ಬಂದಿರುವುದರಿಂದ ಮಹಿಳೆಯ ಸಾಮಾಜಿಕ ಸ್ಥಾನ-ಮಾನ ಮಾತ್ರವಲ್ಲ ಅವಳ ಅಸ್ತಿತ್ವವೇ ಗೌಣವಾಗುತ್ತ ಬಂದಿದೆ. ಅವಳನ್ನು ವೈಭವೀಕರಿಸುತ್ತಲೇ ಬಲಿಪಶುವಾಗಿಸುವ ಲಿಂಗರಾಜಕಾರಣ ಎಲ್ಲೆಡೆಗು ಸಮಾನವಾಗಿ ನಡೆದಿದೆ. ಆ ಲಿಂಗ ರಾಜಕಾರಣದ ನೆರಳು ಜನಪದ ಕಥನಕಾವ್ಯಗಳಲ್ಲಿ ಸಾಕಷ್ಟು ದೊರೆಯುತ್ತವೆ. ಈ ಲೇಖನದಲ್ಲಿ ಮುಖ್ಯ ಚರ್ಚೆಗೆ ಒಳಪಡಿಸುತ್ತಿರುವ ಲೇಖನವೇ ‘ಕೆರೆ ಹೊನ್ನಮ್ಮ’ ಕಥನ ಕಾವ್ಯ.

ಮನು ಕುಲದಲ್ಲಿ ಜಲದ ಕುರಿತಂತೆ ದೈವತ್ವದ ಕಲ್ಪನೆ ಇದ್ದು,ಹುಟ್ಟಿನಿಂದ ಸಾವಿನವರೆಗೂ ಇದರ ಪ್ರಾಮುಖ್ಯತೆಯನ್ನು ನೋಡುತ್ತೇವೆ. ಈ ಜೀವಜಾಲದ ಪೋಷಣೆಗೆ ಅತೀ ಮುಖ್ಯವಾದುದು ನೀರು. ಹಾಗಾಗಿಯೇ ಜನಪದರು ಗಂಗೆಯಲ್ಲಿ ದೈವಿಕ ಶಕ್ತಿಯನ್ನು ಕಾಣುತ್ತಾರೆ. ಊರಿನ ಶ್ರೇಯಸ್ಸಿಗೋಸ್ಕರ, ಸಮಷ್ಟಿಗಾಗಿ, ಕೃಷಿಗೆ ಸಹಾಯಕವಾಗಲೆಂದು ಊರಿನ ಗೌಡ ಅಥವಾ ಮುಖಂಡನು ಕೆರೆಯನ್ನು ಕಟ್ಟಿಸುತ್ತಿದ್ದನು. ಆ ಕೆರೆಯಲ್ಲಿ ನೀರು ಬಂದಿಲ್ಲದೇ ಇರುವುದನ್ನು ಕಂಡು ಪಂಚಾಗವನ್ನು ನೋಡಿಸಿದಾಗ ಬಲಿ ಕೊಡಬೇಕು ಎಂಬ ತೀರ್ಪು ಬರುತ್ತದೆ, ಇಲ್ಲಿ ಹೆಣ್ಣು ಮಗಳೊಬ್ಬಳ ಬಲಿಯ ಅಗತ್ಯವಿದೆ ಎಂದು ನುಡಿದಾಗ ಹೆಣ್ಣುಮಗಳೊಬ್ಬಳ ಅನುಮತಿಯನ್ನು ಪಡೆಯದೇ ಬಲಿಗೆ ಸೂಚಿಸುವುದು ವಿಷಾಧನೀಯ. ಈ ರೀತಿಯ ವಸ್ತುವನ್ನೊಳಗೊಂಡ ಅನೇಕ ಕಥನಕಾವ್ಯಗಳು ಜನಪದರಲ್ಲಿ ದೊರೆಯುತ್ತವೆ, ಇಲ್ಲಿ ಎಲ್ಲಾ ಸಂದರ್ಭದಲ್ಲಿಯೂ ಬಲಿಯಾಗುವವರು ಹೆಣ್ಣು ಮಗಳೇ ಆಗಿರುತ್ತಾಳೆ. ಹೆಣ್ಣನ್ನೇ ಏಕೆ ಬಲಿ ಕೊಡುತ್ತಿದ್ದರು ಅಂದರೆ “ಪ್ರಕೃತಿಯ ಆದಿಮ ಶಕ್ತಿಯನ್ನು ಎದುರಿಸಲು, ಅಥವಾ ಅದರ ಮೂಲ ಪಾತಳಿಯಿಂದ ಬದಲಿಸಲು ಮತ್ತೊಂದು ಆದಿಮ ಶಕ್ತಿಯಿಂದ ಮಾತ್ರ ಸಾಧ್ಯ ಎನ್ನುವ ನಂಬಿಕೆ ಹೆಣ್ಣಿನ ಬಲಿಗಳ ಹಿಂದೆ ಕೆಲಸ ಮಾಡುತ್ತಿರುವ ಸಾಧ್ಯತೆ ಇದೆ. ಇದಕ್ಕೆ ಈ ಪರಂಪರೆಯೇ ರೂಪಿಸುವ ದರ್ಶನದಲ್ಲಿ ಕೂಡ ಉತ್ತರವಿದೆ. ಗಂಗೆ-ನೀರು, ಹೆಣ್ಣು, ಶಕ್ತಿ ಸಮೀಕರಣವೂ ನೀರು ಮತ್ತು ಹೆಣ್ಣನ್ನು ಒಂದೇ ಮೂಲಶಕ್ತಿಯ ಎರಡು ರೂಪಗಳಾಗಿಸಿದೆ. ಪ್ರಕೃತಿಯ ಎದುರು ಪದೇ ಪದೇ ಮಣ್ಣು ಮುಕ್ಕುತ್ತಿದ್ದರೂ ಮನುಷ್ಯ ಪ್ರಕೃತಿಯನ್ನು ತನ್ನ ಅಧೀನಕ್ಕೆ ತಂದುಕೊಳ್ಳಬೇಕೆಂಬ ಪ್ರಯತ್ನದ ಮುಂದುವರಿಕೆಯಾಗಿ ಹೆಣ್ಣಿನ ಬಲಿ ಆಚರಣೆಯು ಕಂಡು ಬರುತ್ತದೆ. ಪ್ರಕೃತಿಯ ವಿರುದ್ಧ ಪ್ರಕೃತಿಯನ್ನು ಬಳಸುವ ತಂತ್ರಗಾರಿಕೆಯನ್ನು ಈ ಆಚರಣೆ ಧ್ವನಿಸುತ್ತದೆ”(ಕೆ.ವೈ.ನಾರಾಯಣ ಸ್ವಾಮಿ,೨೦೦೦,ಪು-೧೪೪). ಅಂದರೆ ಒಂದು ಶಕ್ತಿಯನ್ನು ಹತ್ತಿಕ್ಕುವುದಕ್ಕೆ ಅದೇ ಶಕ್ತಿಯ ಮತ್ತೊಂದು ರೂಪವನ್ನು ಅಸ್ತ್ರವಾಗಿ ಬಳಸಿರುವುದು ಗೋಚರವಾಗುವ ಸಂಗತಿಯಾಗಿದೆ. ಹೆಣ್ಣಿನಲ್ಲಿ ಪ್ರಕೃತಿಯನ್ನು ಎದುರಿಸುವ ಶಕ್ತಿ ಇದೆ ಎಂದು ಬಲಿ ಆರಂಭವಾಗಿದೆಯೋ? ಇಲ್ಲ ಪುರುಷನಲ್ಲಿ ಆ ಶಕ್ತಿ ಇಲ್ಲ ಎಂದೂ ಬಲಿಯ ನೆಪದಲ್ಲಿ ಸ್ತ್ರೀಲೋಕವನ್ನು ಬಲಿಪಶುವನ್ನಾಗಿ ಮಾಡಿದೆಯೋ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಹಾಗಾಗಿ ಹೆಣ್ಣನ್ನು ಮೌಲ್ಯಗಳ ನೆಲೆಯಲ್ಲಿ ಬಂಧಿಸಿ, ಅವಳಲ್ಲಿರುವ ಶಕ್ತಿಯನ್ನು ಮರೆಮಾಚಿ, ಚುಚ್ಚು ಮಾತುಗಳನ್ನಾಡಿ ಅವಳನ್ನು ಹತ್ತಿಕ್ಕುವ ಪ್ರಯತ್ನ ಇದಾಗಿದೆ.

ನದಿಗೆ, ಕೆರೆಗೆ ಕುರಿತಂತೆ ಆಹುತಿಗಳನ್ನು ಕೊಡುವುದು ಬರೀ ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ ಬೇರೆ ಬೇರೆ ದೇಶಗಳಲ್ಲಿ ಬಲಿಯನ್ನು ಕೊಡುತ್ತಿದ್ದರು. ಅದಕ್ಕೆ ಪೂರಕವಾಗಿ “ನದಿಗಳಿಗೆ ಪ್ರಪಂಚದ ಎಲ್ಲ ಭಾಗಗಳಲ್ಲಿ ಪ್ರಾಣಿ ಬಲಿ ಕೊಡುವ ಪದ್ಧತಿಗಳು ಇದ್ದವು. ಈಜಿಪ್ಟ್‌ನಲ್ಲಿ ಎತ್ತು, ಕುದುರೆಗಳನ್ನು, ಆಹುತಿಯಾಗಿ ನದಿಗೆ ಎಸೆಯುತ್ತಿದ್ದರು.

ಚೈನಾ ದೇಶದಲ್ಲಿ ಸುಂದರವಾದ ಕನ್ಯೆಯರನ್ನು ಬಲಿಯಾಗಿ ವರ್ಷಕ್ಕೊಮ್ಮೆ ನೀಡುತ್ತಿದ್ದರು"(ಕೆ.ವೈ. ನಾರಾಯಣ ಸ್ವಾಮಿ,೨೦೦೦,ಪು-೫೬). ಈ ಎಲ್ಲಾ ಅಂಶಗಳನ್ನು ನೋಡಿದರೆ ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ ಬೇರೆ ಎಲ್ಲಾ ದೇಶಗಳಲ್ಲಿಯೂ ಕೂಡ ಮಳೆ ಬರಿಸುವುದಕ್ಕೆ ಅಥವಾ ನೀರಿಗಾಗಿ ಹೆಣ್ಣನ್ನು ಬಲಿ ಕೊಡುತ್ತಿದ್ದರು, ಹಾಗೆಯೇ ಹೆಣ್ಣನ್ನೇ ಮುಖ್ಯವಾಗಿ ಬಳಸಿಕೊಳ್ಳುತ್ತಿದ್ದರು ಈ ಎಲ್ಲಾ ಮೂಲಗಳು ದೃಢೀಕರಿಸುತ್ತವೆ. ಕೆರೆ ಹೊನ್ನಮ್ಮ ಕಥನಕಾವ್ಯದಲ್ಲಿ ಹೊನ್ನಮ್ಮ ಬಂಜೆ ಎಂಬ ಕಾರಣಕ್ಕೆ ಬಲಿ ಕೊಡಲಾಗುತ್ತದೆ. "ಆ ಕೆರೆಯನಾದಾರೆಯ ಹೊನ್ನಮ್ಮನ ಬೇಡಿತ್ತಲ್ಲ ಕೋಲು ಕೋಲೆ, ಹೊನ್ನಮ್ಮನ ಬೇಡಿದರೆ ಈಗಾಲೇ ಕೊಟ್ಟಿನಮ್ಮ ಕೋಲು ಕೋಲೆ" ಎಂದು ತಳವಾರನು ನುಡಿಯುತ್ತಾನೆ. ಇಲ್ಲಿ ಹೊನ್ನಮ್ಮಳು ಬಂಜೆ ಎಂಬ ಕಾರಣಕ್ಕೆ ಬಲಿ ಕೊಡುವಂತದ್ದು ಖಂಡನೀಯ, ಏಕೆಂದರೆ ಅವಳೂ ಕೂಡ ಒಂದು ಹೆಣ್ಣು ಬೇರೆ ಹೆಣ್ಣು ಮಕ್ಕಳ ಹಾಗೆ ಅವಳಿಗೂ ಸಮಾಜದಲ್ಲಿ ಬದುಕುವ ಸ್ವಾತಂತ್ರ್ಯ, ಅಸ್ತಿತ್ವವಿದೆ ಎಂಬ ಅರಿವಿಲ್ಲದೇ, ಯಾವುದೋ ಒಂದು ಕಾರಣದಿಂದ ಅವಳ ಸೃಷ್ಟಿಯನ್ನೇ ನಾಶ ಮಾಡುವುದು ಎಷ್ಟು ಸರಿ. ಇಲ್ಲಿ ಹೊನ್ನಮ್ಮಳು ಕೆರೆಯಲ್ಲಿ ಬಲಿಯಾಗುವುದಕ್ಕೆ ವಿರೋಧ ಕಾಣಬರುವುದಿಲ್ಲ, ಕೊನೆಯಲ್ಲಿ ಅಣ್ಣ ಬಂದ ಸಂದರ್ಭದಲ್ಲಿ ಅವಳ ತೀವ್ರವಾದ ಪ್ರತಿಭಟನೆಯು ನಮಗೆ ಗೋಚರಿಸುತ್ತದೆ. ಅವಳು ಕೆರೆಗೆ ಬಲಿಯಾಗುವುದಕ್ಕೆ ಕಾರಣರಾದವರನ್ನೆಲ್ಲ ಸಂಹರಿಸು ಎಂದು ಅಣ್ಣನಲ್ಲಿ ಕೇಳಿಕೊಳ್ಳುತ್ತಾಳೆ. ಸಹನಶೀಲೆಯಾದ ಹೆಣ್ಣು ಇಷ್ಟು ಕಠಿಣವಾಗಿ ನುಡಿಯುವಾಗ ಅವಳ ಆ ಸಂದರ್ಭದ ನೋವಿನ ಆಗಾಧತೆ ಎಷ್ಟು ಎಂಬುದು ಈ ಸಾಲುಗಳು ಧ್ವನಿಸುತ್ತವೆ.

ತಳವರನ ಕಡಿಯಣ್ಣ
ತಾಳೆಮರಕ್ಕೆಳಿಯಣ್ಣ ತುಂಬಿಲಾಲಿ
ಬಾರಿಕನ ಕಡಿಯಣ್ಣ
ಬಾಜಾರಕ್ಕೆಳಿಯಣ್ಣ ತುಂಬಿಲಾಲಿ
ಮಾವಾನ ಕಡಿಯಣ್ಣ
ಮಾವಿನ ಮರಕ್ಕೆಳಿಯಣ್ಣ ತುಂಬಿಲಾಲಿ
ಅತ್ತೇನ ಕಡಿಯಣ್ಣ
ಅತ್ತಿ ಮರಕ್ಕೆಳಿಯಣ್ಣ ತುಂಬಿಲಾಲಿ
ನನ್ನೇನೆ ಗಂಡಾಗ
ಮದುವೀಯ ಮಾಡಣ್ಣ ತುಂಬಿಲಾಲಿ
(ಹಾಡಿದವರು-ಹನುಮಕ್ಕ ಮತ್ತು ಸಂಗಡಿಗರು, ಬಳ್ಳಾರಿ)

ಹೊನ್ನಮ್ಮ ತನ್ನ ಗಂಡನಿಗೆ ಮದುವೆಯನ್ನು ಮಾಡು ಎಂದು ಹೇಳಿ ಗಂಗೆಯಲ್ಲಿ ಲೀನವಾಗುತ್ತಾಳೆ. ತಂಗಿಯ ವಚನದಂತೆ ಕಾಮನು ಎಲ್ಲರನ್ನೂ ಸಂಹರಿಸುತ್ತಾನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಸಮಾಜದಿಂದ ಬಂಜೆ ಎಂದು ತಿರಸ್ಕೃತಳಾದ ಹೊನ್ನಮ್ಮಳು, ಕೆರೆಯಲ್ಲಿ ನೀರು ಬರುವುದಕ್ಕೆ, ಸಮಷ್ಟಿಯ ಹಿತಕ್ಕೆ, ಶ್ರೇಯೋಭಿವೃದ್ಧಿಗೆ ಬಂಜೆಯು ಹೇಗೆ ಪುರಸ್ಕೃತಳಾದಳು ಎಂಬ ಅಂಶ ಒಂದು ಕಡೆಯಾದರೆ, ಅಮಂಗಳ ಎಂದು ಕರೆದ ಅದೇ ಸಮಾಜ ಮಂಗಳ ಕಾರ್ಯಕ್ಕೆ ಹೇಗೆ ಈ ಪ್ರಬಲ ವರ್ಗವು ಆರಿಸಿತು ಎಂಬುದು ದ್ವಂದ್ವ ನಿಲುವನ್ನು ಈ ಕಥನಕಾವ್ಯವು ಓದುಗರ, ಸಮಾಜದ ಮುಂದೆ ತೆರೆದಿಡುತ್ತದೆ. ಈ ರೀತಿಯ ದ್ವಂದ್ವತೆಯನ್ನು ಗಮನಿಸಿದರೆ ಈ ರೀತಿಯ ಎಲ್ಲಾ ಕುತಂತ್ರಗಳು ಕೂಡ ಹೆಣ್ಣನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕೆಂಬ ನಿಲುವಿನಿಂದ ಅವಳನ್ನು ಬಂಧಿಸಿ ಶೋಷಿಸುತ್ತಿರುವುದನ್ನು ಈ ಕಥನಕಾವ್ಯಗಳು ನಮ್ಮ ಮುಂದೆ ತೆರೆದಿಡುತ್ತವೆ.

ಒಟ್ಟಾರೆಯಾಗಿ ಒಬ್ಬ ಹೆಣ್ಣಿನ ನೋವನ್ನು ಇನ್ನೊಬ್ಬ ಹೆಣ್ಣು ಅರ್ಥಮಾಡಿಕೊಂಡು ಅನಾಮಿಕೆಯಾಗಬೇಕಿದ್ದ ಅವಳ ಬಲಿದಾನವನ್ನು ಕಥನಕಾವ್ಯದ ಮೂಲಕ ಶಾಶ್ವತಗೊಳಿಸುವ ಪ್ರಯತ್ನವನ್ನು ಜನಪದ ಸ್ತ್ರೀಯರು ಮಾಡಿದ್ದಾರೆ. ಹೆಚ್ಚಾಗಿ ಬಲಿಯಾಗಿರುವವರೆಲ್ಲ ಸ್ತ್ರೀಯರೇ. ಇಲ್ಲಿ ಬಲಿ ಕೊಡುವ ಪದ್ಧತಿಯು ಜನಪದರ ನಂಬಿಕೆ, ಹೆಣ್ಣನ್ನೇ ಬಲಿ ಕೊಡಬೇಕು ಎನ್ನುವುದು ಪುರುಷಪ್ರಧಾನತೆಯ ನಂಬಿಕೆ. ಅಂದಿನಿಂದ-ಇಂದಿನವರೆಗೂ ಹೆಣ್ಣನ್ನೇ ಬೇರೆ ಬೇರೆ ಸಂದರ್ಭಗಳಿಗೆ ಅವರಿಗೆ ಉಪಯೋಗವಾಗುವ ಹಾಗೆ ಬಲಿ ಕೊಡುತ್ತಾ ಬಂದರು. ಅದು ಈಗಲೂ ಕೂಡ ನಿಧಿಯನ್ನು ತಮ್ಮದಾಗಿಸಿಕೊಳ್ಳುವುದಕ್ಕೆ, ವಾಮಾಚಾರಗಳಿಗೆ ಹೆಣ್ಣು ಮಕ್ಕಳನ್ನು ಅಥವಾ ಹೆಣ್ಣು ಮಗುವನ್ನು ಬಲಿ ಕೊಡುತ್ತಿದ್ದಾರೆ. ಇಂತಹ ಆಚರಣೆಗಳು ಹೆಣ್ಣನ್ನು ಶೋಷಣೆಗೊಳಗು ಮಾಡಿರುವಂತದ್ದನ್ನು ಕಾಣಬಹುದಾಗಿದೆ. ಈ ರೀತಿಯ ಆಚರಣೆಗಳನ್ನು ಸಮಾಜವು ಪೋಷಿಸುವಂತಹ ಕೆಲಸವಾಗಬಾರದು. ಪುರುಷಪ್ರಧಾನವು ರೂಪಿಸಿರುವ ಮೌಲ್ಯಗಳಲ್ಲಿ ಹೆಣ್ಣನ್ನೇ ಬಂಧಿಯಾಗಿಸಿರುವಂತದ್ದು ಯಾಕೆ? ಗಂಡಿಗೆ ಒಂದು ನ್ಯಾಯ, ಹೆಣ್ಣಿಗೆ ಒಂದು ನ್ಯಾಯ ಏಕೆ? ಬಂಜೆಯಾಗುವುದಕ್ಕೆ ಹೆಣ್ಣೊಬ್ಬಳೇ ಕಾರಣಳಲ್ಲ, ಗಂಡೂ ಕೂಡ ಕಾರಣಕರ್ತ ಎನ್ನುವುದನ್ನು ಯಾಕೆ ಸಮಾಜ ಅರಿತುಕೊಳ್ಳುವುದಿಲ್ಲ, ಸಮಾಜ ಏಕೆ ಪುರುಷನ ನಿರ್ವೀಯತೆ ಕುರಿತಂತೆ ಪ್ರಶ್ನಿಸುವುದಿಲ್ಲ, ಬರೀ ಹೆಣ್ಣನ್ನೇ ಅವಮಾನಿಸುವುದು, ನಿಂದಿಸುವುದು ಏಕೆ? ಎಂಬ ಈ ಎಲ್ಲಾ ಪ್ರಶ್ನೆಗಳು ನಮ್ಮ ಮುಂದೆ ನಿಲ್ಲುತ್ತವೆ. ಇಲ್ಲಿ ಪಕ್ಷಪಾತದ ಧೋರಣೆ ಇದೆ ಎಂಬ ಅಂಶವು ಎದ್ದು ಕಾಣುತ್ತದೆ. ಪ್ರಕೃತಿಯ ದೃಷ್ಟಿಯಲ್ಲಿ ಹೆಣ್ಣು ಗಂಡು ಎಂಬ ತಾರತಮ್ಯವಿಲ್ಲ, ಆದರೆ ನಾವು ಬದುಕುತ್ತಿರುವ ಸಮಾಜದಲ್ಲಿ ತಾರತಮ್ಯವೇಕೆ, ಪ್ರಕೃತಿ ಏನಾದರೂ ಹೆಣ್ಣು-ಗಂಡು ಎಂಬ ಭೇದ ಭಾವ ಮಾಡಿದ್ದರೆ ಇಡೀ ಸಮಾಜವನ್ನೇ ಮಹಿಳಾನಿಷ್ಠವಾಗಿಸುವುದರಲ್ಲಿ ಸಂದೇಹವೇ ಇಲ್ಲ, ಏಕೆಂದರೆ ಎಲ್ಲದರಲ್ಲೂ ಕೂಡ ಹೆಣ್ಣನ್ನು ನಿಸರ್ಗಕ್ಕೆ ಸಮೀಕರಿಸಿ ಆರಾಧನೆ ಮಾಡುತ್ತಿದ್ದರಿಂದ, ನಿಸರ್ಗದ ಒಂದು ಭಾಗವಾಗಿ ಹೆಣ್ಣನ್ನು ಪೂಜಿಸುತ್ತಿದ್ದರಿಂದ ಈ ಪ್ರಾಮುಖ್ಯತೆಯನ್ನು ಪಡೆದಿರುತ್ತಿದ್ದಳು ಎಂದು ಊಹೆ ಮಾಡಬಹುದಿತ್ತು, ಆದರೆ ಇಂದು ಎಲ್ಲಾ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿರುವ ಹೆಣ್ಣು ಎಲ್ಲೋ ಒಂದು ಕಡೆ ಪುರುಷನ ಶೋಷಣೆಗೆ ಒಳಗಾಗುತ್ತಿದ್ದಾಳೆ ಎನ್ನುವುದು ಅಂದು-ಇಂದು ಸಾರ್ವಕಾಲಿಕ ಸತ್ಯವಾಗಿದೆ. ಹಾಗಾಗಿಯೇ ಜನಪದ ಮಹಿಳೆಯರ ಕುರಿತಂತೆ ಅಧ್ಯಯನ ಮಾಡುವುದಕ್ಕೆ, ಅವರ ಅನನ್ಯತೆಯನ್ನು ಅರಿಯುವುದಕ್ಕೆ, ಮೂಲ ಸಂಸ್ಕೃತಿಯನ್ನು ವಿಶ್ಲೇಷಿಸುವುದಕ್ಕೆ ಈ ರೀತಿಯ ಕಥನಕಾವ್ಯಗಳು ಇಂದು ಹೆಣ್ಣಿನ ಆಂತರಿಕ ಸಾಕ್ಷ್ಯಗಳಾಗಿವೆ ಎಂದೇ ಹೇಳಬಹುದು.

**ಪರಾಮರ್ಶನ ಗ್ರಂಥಗಳು**


೧. ನಾರಾಯಣ ಸ್ವಾಮಿ ಕೆ.ವೈ.೨೦೦೦, ನೀರದೀವಿಗೆ, ಲೋಹಿಯಾ ಪ್ರಕಾಶನ, ಬಳ್ಳಾರಿ.
೨. ರುಕ್ಮಿಣಿ ಎಂ.ಕೆ, ೨೦೦೦, ಜನಪದ ಕಥನ ಗೀತೆಗಳಲ್ಲಿ: ಒಂದು ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು ವಿಶ್ವವಿದ್ಯಾನಿಲಯ.
೩. ಕಾಳೇಗೌಡ ನಾಗವಾರ (ಸಂ), ೨೦೦೯ ಜನಪದ ಕಾವ್ಯ ಸಂಪುಟ, ವಾಣಿ ಪ್ರಕಾಶನ, ಮೈಸೂರು.
೪. ನಾಗೇಗೌಡ ಎಚ್.ಎಲ್.೧೯೭೬, ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯ.
೫. ರಾಜಪ್ಪ ಟಿ.ಎಸ್(ಸಂ),೧೯೭೪, ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.